# ಅಂದದ ಉತ್ತಪ್ಪ

ಸೃಜನಶೀಲತೆ ಎಂದರೆ ಇದು. ತಮಿಳುನಾಡಿನ ಮುನ್ನಾರಿನ ಶ್ರೀನಿವಾಸ ಹೋಟೆಲ್‌ನಲ್ಲಿ ಉತ್ತಪ್ಪವನ್ನು ಈ ರೀತಿ ಸುಂದರ ವಿನ್ಯಾಸದಲ್ಲಿ ತಯಾರಿಸಿ ಗ್ರಾಹಕರಿಗೆ ಊಣ ಬಡಿಸಲಾಗುವುದು. ರುಚಿಯ ಜೊತೆ ಅಂದವನ್ನೂ ಸವಿಯುತ್ತ ತಿನ್ನಬಹುದು.

**■ ಸುರೇಖಾ ಭೀಮಗುಳಿ, ಬೆಂಗಳೂರು**



# ಯಹೂದಿಯರ ಪ್ರಾರ್ಥನಾ ಮಂದಿರ ಸಿನಗೋಗ್

ಕೊಚ್ಚಿಯ ಐತಿಹಾಸಿಕ ಪಟ್ಟಣ ಮಟ್ಟನ್ ಚರ್ರೀ. ಅಲ್ಲಿನ ಯಹೂದೀ ರಸ್ತೆಯ ಇತಿಹಾಸ 15ನೆಯ ಶತಮಾನಕ್ಕೂ ಹಿಂದಿನದ್ದು. ರಾಜನ ಅರಮನೆ 'ಡಚ್ ಪ್ಯಾಲೇಸ್' ಹಾಗೂ 'ಸಿನಗೋಗ್' ಇಲ್ಲಿನ ಪ್ರಮುಖ ಆಕರ್ಷಣೆಗಳು. ಕೊಚಿನ್ ಯಹೂದಿಗಳೆಂದು ಕರೆಯಲ್ಪಡುವ ಇವರ ಸಂಖ್ಯೆ 194 ರಲ್ಲಿ ಸುಮಾರು 1500. ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ಹಾಗೂ ಇಸ್ರೇಲ್ ದೇಶದ ಉದಯ ಹಲವರನ್ನು ವಲಸೆ ಹೋಗುವಂತೆ ಮಾಡಿತು. ಪ್ರಸ್ತುತ 350 ಯಹೂದಿಗಳು ಕೊಚ್ಚಿಯಲ್ಲಿ ವಾಸಿಸುತ್ತಿದ್ದಾರೆ. ಈ ಸಿನಗೋಗ್ 1568ರಲ್ಲಿ ನಿರ್ಮಾಣವಾಗಿದ್ದು ಕೊಚ್ಚಿಯ ಸುತ್ತಮುತ್ತ ಇರುವ 8 ಸಿನಗೋಗ್ ಗಳಲ್ಲಿ ಒಟ್ಟಾಗಿ ಪ್ರಾರ್ಥನೆ ಸಲ್ಲಿಸುವ ಏಕಮಾತ್ರ ಸೀನಗೊಗ್ ಇದೊಂದೆ. 1662ರ ಪೋರ್ಚುಗೀಸ್ ದಾಳಿಯಲ್ಲಿ ಹಾಳಾದ ಇದನ್ನು 1666ರಲ್ಲಿ ಡಚ್ಚರು ಮತ್ತೆ ನಿರ್ಮಿಸಿದರು. 18ನೆಯ ಶತಮಾನದಲ್ಲಿ ಕ್ಯಾಸ್ಟರ್ ಹಾಗೂ ಹಲೆಗುವ ಕುಟುಂಬದ ಇಬ್ಬರು ಸದಸ್ಯರು ಮತ್ತೆ ನವೀಕರಿಸಿದರು. 1762ರಲ್ಲಿ ಚೀನಾ ದೇಶದಿಂದ ಆಮದಾದ ತೆಳ್ಳನೆಯ ರೆಂಬೆಯ ಕಲಾತ್ಮಕ ಚಿತ್ರವಿರುವ ಟೈಲ್‌ಗಳನ್ನು ಹಾಸಲಾಗಿದೆ. ಅತ್ಯಂತ ಸುಂದರವಾಗಿರುವ ಈ ಪ್ರಾರ್ಥನಾ ಮಂದಿರಗಳು ಐತಿಹಾಸಿಕ ಕುರುಹುಗಳು.

**■ ರಾ.ಲ.ಜಗದೀಶ್, ಮಂಡ್ಯ**





# ದೀಪ ಲಕ್ಷ್ಮಿ

ಈ ದೀಪ ಲಕ್ಷ್ಮಿಯು ನೋಡಲು ಲೋಹದ ಮೂರ್ತಿಯಂತೆ ಕಾಣುತ್ತದೆ. ಆದರೆ ಇದು ಲೋಹದ್ದಲ್ಲ, ಪೇಪರ್ ಮ್ಯಾಷ್ ಎಂಬ ಕಲೆಯನ್ನು ಬಳಸಿ ಮಾಡಿದ್ದು. ಇದರ ತೂಕ ಕೇವಲ 100ಗ್ರಾಂ. ಕಲೆಗಾರನ ಕೈ ಚಳಕದಿಂದ ನಿಖರ ಅಳತೆಯಲ್ಲಿ ತಯಾರಾದ ಈ ಸುಂದರ ದೀಪ ಲಕ್ಷ್ಮಿ ಸುಮಾರು 25 ವರ್ಷಗಳಿಂದ ನನ್ನಲ್ಲಿ ಇದೆ. ಹಬ್ಬದ ಸಮಯದಲ್ಲಿ ಚಿನ್ನದ ಬಣ್ಣದ ಲೇಪನ ಮಾಡಿ ಜತನದಿಂದ ಇರಿಸಿರುವೆ.

**■ ಮಧುರ ಸುಬ್ರಹ್ಮಣ್ಯ, ಬೆಂಗಳೂರು**